# ಮಹಾರಾಷ್ಟ್ರದಲ್ಲಿ ದಲಿತ ಚಳುವಳಿ: ಮಹಿಳಾ ಪ್ರತಿನಿಧೀಕರಣ

ಮಹಾದೇವಿ ಹುಣಶೀಬೀಜ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ. ಎಲ್. ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.15504245

## ABSTRACT:

ಕೌಟುಂಬಿಕ ಜವಾಬ್ದಾರಿಗಳಲ್ಲಿ ಮುಳುಗಿ ಹೋಗಿರುವ ಮಹಿಳೆ ಎಲ್ಲಾ ಅಡೆತಡೆಗಳನ್ನು ಮೀರಿ ಸಾರ್ವಜನಿಕ ಹೋರಾಟ, ರಾಜಕಾರಣ, ಸಮಾಜ ಸೇವೆಗಳಲ್ಲಿ ತೊಡಗಿಸಿಕೊಂಡರೂ ಎಲೆ ಮರೆಯ ಕಾಯಿಯಂತೆ ಇರಬೇಕಾಗುತ್ತದೆ. ಹೀಗಿರುವಾಗಲೇ ಮಹಾರಾಷ್ಟ್ರದ ಸಾರ್ವಜನಿಕ ಹೋರಾಟಗಳಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದನ್ನು ಕಾಣಬಹುದು. ಅಂಬೇಡ್ಕರ್‌ರ ಜೊತೆಗೆ ನಿಮ್ನ ವರ್ಗಗಳ ಮಹಾವಿಮೋಚನಾ ಚಳುವಳಿಯಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡರು. ಭಾರತ ರಾಜಕೀಯ ಸ್ವಾತಂತ್ರ್ಯ ಪಡೆಯುವ ಹವಣಿಕೆಯಲ್ಲಿದ್ದಾಗ ಅಂಬೇಡ್ಕರ್‌ರು ಸಮಾಜದ ಅಂಚಿಗೆ ದೂಡಲ್ಪಟ್ಟವರ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದರು. ದಲಿತ ಸಂಘಟನೆ, ಹೋರಾಟ, ಚಳುವಳಿ, ದಲಿತ ಪತ್ರಿಕೆಗಳ ಪ್ರಕಟಣೆ, ಎದುರಿಸಿದ ಚುನಾವಣೆ, ಬೌದ್ಧ ಧರ್ಮ ಮತಾಂತರ ಹೀಗೆ ಅವರು ಕೈಗೊಂಡ ಮಹತ್ವದ ಕಾರ್ಯಗಳಲ್ಲಿ ಪುರುಷರಂತೆ ಅಪಾರ ಸಂಖ್ಯೆಯ ದಲಿತ ಮಹಿಳೆಯರು ಅವರೊಡನೆ ಇದ್ದರು. ಆದರೆ ಕಾಂಗ್ರೆಸ್ ಮುನ್ನಡೆಸುತ್ತಿದ್ದ ಸ್ವಾತಂತ್ರ್ಯ ಹೋರಾಟದ ಮಹಿಳೆಯರು ಮುನ್ನೆಲೆಗೆ ಬಂದಂತೆ ಅಂಬೇಡ್ಕರ್ ಜೊತೆಗಿನ ದಲಿತ ಚಳುವಳಿಯಲ್ಲಿದ್ದ ಮಹಿಳೆಯರು ಮುನ್ನೆಲೆಗೆ ಬರಲೇ ಇಲ್ಲ. ದಲಿತ ಹೋರಾಟದ ಕುರಿತು ಸಂಶೋಧನೆ ಮತ್ತು ಇತಿಹಾಸವನ್ನು ದಾಖಲಿಸುವಾಗಲೂ ಮಹಿಳೆಯರು ಕಾಣದೆ ಹೋದರು. ಇತಿಹಾಸದಲ್ಲಿ ಮರೆಯಾದ ಆದರೆ ನಿಮ್ನ ವರ್ಗಗಳ ವಿಮೋಚನಾ ಚಳುವಳಿಯಲ್ಲಿ ಅಂಬೇಡ್ಕರ್‌ರ ಹೆಗಲಿಗೆ ಹೆಗಲು ಕೊಟ್ಟ ಮಹಿಳೆಯರ ಪ್ರಾತಿನಿಧ್ಯವನ್ನು ಅವಲೋಕಿಸುವುದು ಮುಖ್ಯವಾಗಿದೆ. ಈ ಲೇಖನದಲ್ಲಿ ಅಂಬೇಡ್ಕರ್ ಅವರು ದಲಿತ ಚಳುವಳಿಯ ಮುಖಂಡತ್ವವನ್ನು ವಹಿಸಿದಲ್ಲಿಂದ ಅವರು ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವವರೆಗಿನ ಎಲ್ಲ ಮಹತ್ವದ ಕಾರ್ಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಅವಲೋಕಿಸಲಾಗಿದೆ.

## KEYWORDS:

ನಿಮ್ನ ವರ್ಗಗಳ ವಿಮೋಚನಾ ಚಳುವಳಿ, ಮಹಾಡ್ ಸತ್ಯಾಗ್ರಹ, ಪಾರ್ವತಿ ದೇವಾಲಯ, ಕಾಳಾರಾಮ ದೇವಾಲಯ, ಬೌದ್ಧಧರ್ಮ, ಮತಾಂತರ.

ಚಾತುರ್ವರ್ಣ ವ್ಯವಸ್ಥೆಯು ಪುರುಷರಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಶೂದ್ರನಾಗುವ ಆಯ್ಕೆಯನ್ನು ನೀಡುತ್ತದೆ. ಆದರೆ ಮಹಿಳೆಯರಿಗೆ ಈ ನಾಲ್ಕರಲ್ಲಿ ಆಯ್ಕೆ ಸ್ವಾತಂತ್ರವನ್ನು ನೀಡಿಲ್ಲ. ಏಕೆಂದರೆ ಮಹಿಳೆ ಶೂದ್ರನಂತೆ ಪಾಲಕರ ಅಧೀನದಲ್ಲಿ ಇರುವವಳು. ಪಾಲಕರು ಇರುವ ವರ್ಣವ್ಯವಸ್ಥೆಯಲ್ಲಿ ಅವಳು ಇರಬೇಕಾದದ್ದು ಅನಿವಾರ್ಯವಾಗಿತ್ತು. ವೇದಗಳ ಕಾಲದಲ್ಲಾಗಲೀ ಬೌದ್ಧಧರ್ಮದಲ್ಲಾಗಲೀ ಸ್ತ್ರೀಯನ್ನು ಕೇವಲ ಇತರರ ಸೇವೆಗಾಗಿ ಇರುವವಳೆಂದು ಭಾವಿಸಿರಲಿಲ್ಲ. ಅವಳಿಗೂ ಅಧ್ಯಯನ, ಅಧ್ಯಾಪನ, ಚರ್ಚೆಗಳಲ್ಲಿ ಭಾಗವಹಿಸುವ ಸ್ವಾತಂತ್ರ್ಯವಿತ್ತು. ಕಾಲಾಂತರದಲ್ಲಿ "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬಂತಾಯಿತು. ಬ್ರಿಟಿಷರ ಆಳ್ವಿಕೆಯಿಂದಾಗಿ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗತೊಡಗಿದವು. ಮಹಿಳೆಯರಿಗೂ ಈ ಬದಲಾವಣೆಯ ಗಾಳಿ ಬೀಸಿತು. ಅವರಿಗೆ ಅರ್ಹತೆ ಮತ್ತು ಸಾಮರ್ಥ್ಯಗಳಿದ್ದರೂ ಕೌಟುಂಬಿಕ ಜವಾಬ್ದಾರಿಗಳಿಂದಾಗಿ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಕಠಿಣವಾಗಿತ್ತು. ಒಂದೊಮ್ಮೆ ಎಲ್ಲ ಎಲ್ಲೆಗಳನ್ನು ಮೀರಿ ಕಾರ್ಯಪ್ರವೃತ್ತರಾದರೂ ಎಲೆಮರೆಯ ಕಾಯಿಯಂತೆ ಇರಬೇಕಾದ ಸ್ಥಿತಿ ಮಹಿಳೆಯರದ್ದಾಗಿತ್ತು. ಆದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸ್ಫೂರ್ತಿಯಿಂದ ಅವರನ್ನೇ ದೇವರೆಂದು ನಂಬಿದ್ದ ಸಾವಿರಾರು ಮಹಿಳೆಯರು ಸಮಾಜದ ಕೊನೆಯ ಅಂಚಿನಲ್ಲಿರುವ ಶೋಷಿತ ಸಮುದಾಯದ ಮಹಾವಿಮೋಚನಾ ಚಳುವಳಿಯಲ್ಲಿ ಪಾಲ್ಗೊಂಡು ಸಾಹಸ ಮೆರೆದರು.

19ನೇ ಶತಮಾನದಲ್ಲಿ ಭಾರತದಲ್ಲಿ ರಾಜಕೀಯ ಸ್ವಾತಂತ್ರ್ಯ ಚಳುವಳಿ ಮತ್ತು ನಿಮ್ನ ವರ್ಗಗಳ ವಿಮೋಚನಾ ಚಳುವಳಿ ಏಕಕಾಲದಲ್ಲಿ ನಡೆದವು. ಭಾರತ ರಾಜಕೀಯ ಸ್ವಾತಂತ್ರ್ಯ ಪಡೆಯುವ ಹವಣಿಕೆಯಲ್ಲಿದ್ದರೆ ಶೋಷಿತ ಸಮುದಾಯಕ್ಕೆ ಸ್ವಾತಂತ್ರ್ಯ ದೊರಕಿಸುವ ಕನಸು ಕಾಣುತ್ತಿದ್ದ ಬಾಬಾ ಸಾಹೇಬರಿಗೆ ಪುರುಷರಂತೆ ಮಹಿಳೆಯರು ಹೆಗಲುಕೊಟ್ಟು ಹಗಲಿರುಳು ದುಡಿದರು. ಅಂಬೇಡ್ಕರ್‌ರ ಎಲ್ಲ ಮಹತ್ವದ ಕಾರ್ಯಗಳಲ್ಲೂ, ದೃಢ ನಿರ್ಧಾರಗಳಲ್ಲೂ ಹೆಣ್ಣು ಮಕ್ಕಳು ಅವರ ಜೊತೆಗಿದ್ದರು. ರಾಜಕೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರು ಮುನ್ನೆಲೆಗೆ ಬಂದಂತೆ ನಿಮ್ನ ವರ್ಗಗಳ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರು ಬರಲಿಲ್ಲ. ನೋವು, ಅವಮಾನಗಳನ್ನು ಅನುಭವಿಸಿಯೂ ಶೋಷಿತ ಸಮುದಾಯದ ಉದ್ಧಾರಕ್ಕೆ ಶ್ರಮಿಸಿದ ಮಹಿಳೆಯರು ಬೆಳಕಿಗೆ ಬರಲೇ ಇಲ್ಲ. ಆದ್ದರಿಂದ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಹಾರಾಷ್ಟ್ರದಲ್ಲಿ ಹುಟ್ಟು ಹಾಕಿದ ಆತ್ಮಗೌರವ, ಸಮಾನತೆ, ಹಕ್ಕೊತ್ತಾಯಗಳ ಚಳುವಳಿಯಲ್ಲಿ ಮಹಿಳೆಯರ ಪ್ರತಿನಿಧೀಕರಣದ ಕುರಿತು ಅವಲೋಕನ ಮಾಡುವುದು ಅವಶ್ಯವಾಗಿದೆ.

19ನೇ ಶತಮಾನದಲ್ಲಿ ಜ್ಯೋತಿಬಾ ಫುಲೆ ಅವರು ಬ್ರಾಹ್ಮಣ ಆಡಳಿತವನ್ನು

ವಿರೋಧಿಸಿದ್ದಲ್ಲದೇ ಪುಣೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆಯನ್ನು ತೆರೆದರು. ಸ್ವತಃ ತಮ್ಮ ಪತ್ನಿ ಸಾವಿತ್ರಿಬಾಯಿ ಫುಲೆ ಅವರಿಗೆ ಅಕ್ಷರಾಭ್ಯಾಸ ಮಾಡಿಸಿದರು. ಅವರು ಶಿಕ್ಷಕಿಯಾಗಿ ಜ್ಯೋತಿಬಾ ಫುಲೆ ಅವರೊಂದಿಗೆ ಶಾಲೆಗಳನ್ನು ನಡೆಸುವ ಕಾರ್ಯದಲ್ಲಿ ಭಾಗಿಯಾದರು. ಸಾವಿತ್ರಿಬಾಯಿ ಫುಲೆ ಅವರು ಮಹಿಳಾ ಶಿಕ್ಷಣಕ್ಕೆ ಮಾಡಿದ ಕಾರ್ಯಗಳಿಂದಾಗಿ ಮಹಾರಾಷ್ಟ್ರದಲ್ಲಿ ಅತ್ಯಂತ ಪೂಜ್ಯನೀಯ ಮತ್ತು ಮಾದರಿ ವ್ಯಕ್ತಿಯಾಗಿದ್ದಾರೆ. 20ನೇ ಶತಮಾನದಲ್ಲಿ ಕೊಲ್ಲಾಪುರದ ಮರಾಠ ಮಹಾರಾಜ ಶಾಹೂ ಮಹಾರಾಜರು ಬ್ರಾಹ್ಮಣರಿಗೆ ಮೀಸಲಾದ ಹುದ್ದೆಗಳಿಗೆ ಅಬ್ರಾಹ್ಮಣರನ್ನು ಮತ್ತು ಕೆಲವು ಹುದ್ದೆಗಳಿಗೆ ಅಸ್ಪೃಶ್ಯರನ್ನು ನೇಮಕ ಮಾಡಿದರು. 1906 ರಲ್ಲಿ ವಿಠಲ ರಾಮಜಿ ಶಿಂಧೆ ಅವರು ನಿಮ್ನ ವರ್ಗಗಳ ಸಮಿತಿಯನ್ನು ಸ್ಥಾಪಿಸಿದರು. ಅವರಿಂದ ಪ್ರಭಾವಿತರಾದ ಕಿಶನ್ ಮತ್ತು ಜಿ. ಎ. ಗವೈ ಅವರು ಶಿಕ್ಷಣ ನೈರ್ಮಲ್ಯ, ಹೀನಾಯ ಸಾಮಾಜಿಕ ಆಚರಣೆಗಳ ನಿಷೇಧದ ಜೊತೆಗೆ ಅಸ್ಪೃಶ್ಯರಲ್ಲಿರುವ ಉಪಜಾತಿಗಳ ನಡುವೆ ಐಕ್ಯತೆಯನ್ನು ತರುವ ಉದ್ದೇಶದೊಂದಿಗೆ 1915ರಲ್ಲಿ ನಿಮ್ನ ವರ್ಗಗಳ ಸಂಘವನ್ನು ಆರಂಭಿಸಿದರು. ‘‘ಸೋಮವಂಶಿ ಮಿತ್ರ’’ ಪತ್ರಿಕೆಯನ್ನು ನಡೆಸುತ್ತಿದ್ದ ಶಿವರಾಮ ಜಾನಬಾ ಕಾಂಬ್ಳೆ ಅವರು ದೇವದಾಸಿ ಮತ್ತು ಮುರುಳಿಯರನ್ನು ದೇವರಿಗೆ ಅರ್ಪಿಸುವುದರ ವಿರುದ್ಧ ಆಂದೋಲನ ಶುರು ಮಾಡಿದರು. ಅಲ್ಲದೆ ದಲಿತ ಯುವಕರು ಮುರುಳಿಯರನ್ನು ಮದುವೆಯಾಗಬೇಕೆಂದು ಮನವಿಯನ್ನು ಮಾಡಿದರು.

ದಲಿತ ಸಮುದಾಯ ಅದಾಗಲೇ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕ ನೆಲೆಗಳಲ್ಲಿ ಅಂಬೆಗಾಲಿಡುತ್ತ ಬೆಳೆಯುತ್ತಿರುವ ಸಂದರ್ಭದಲ್ಲಿ ಅಂಬೇಡ್ಕರ್ ಅವರು 1920ರ ಮೇ 30 ಮತ್ತು 31 ರಲ್ಲಿ ನಾಗಪುರದಲ್ಲಿ ನಡೆದ ಅಖಿಲ ಭಾರತ ನಿಮ್ನ ವರ್ಗಗಳ ಸಮ್ಮೇಳನದ ಮೂಲಕ ಅಸ್ಪೃಶ್ಯರ ನಾಯಕತ್ವವನ್ನು ವಹಿಸಿಕೊಂಡರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶಾಹೂ ಮಹಾರಾಜರ ಪ್ರೋತ್ಸಾಹ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಬೆಂಬಲದಿಂದ ದೂರವಿರುವದಾಗಿ ಘೋಷಿಸಿದರು. ಮೊದಲು ಹಿಂದೂಧರ್ಮದ ಚೌಕಟ್ಟಿನೊಳಗೆ ಸಮಾನತೆ ಮತ್ತು ಸಾರ್ವಜನಿಕ ಸ್ಥಳಗಳ ಬಳಕೆಯ ಹಕ್ಕನ್ನು ಪ್ರತಿಪಾಧಿಸುವ ಗುರಿಯನ್ನು ಅವರು ಹೊಂದಿದ್ದರು. ಆದರೆ ಮೊದಲು ಸತ್ಯಾಗ್ರಹದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡುವುದು ಮತ್ತು ದಲಿತ ಸಮುದಾಯವನ್ನು ಸಂಘಟಿಸುವುದು ಮುಖ್ಯವಾಗಿತ್ತು.

'1927ರ ಮಹಾಡ್ ಸತ್ಯಾಗ್ರಹ ಹಾಗೂ 1956 ರಲ್ಲಾದ ಬೌದ್ಧಧರ್ಮಕ್ಕೆ ಮತಾಂತರ ಈ ಎರಡು ಐತಿಹಾಸಿಕ ಘಟನೆಗಳ ನಡುವಿನ ಅವಧಿಯನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನೇತೃತ್ವದಲ್ಲಿ ನಡೆದ ದಲಿತ ವಿಮೋಚನಾ

ಚಳುವಳಿಯ ಅವಧಿ ಎಂದು ಕರೆಯಬಹುದು.'[1] ಈ ಅವಧಿಯಲ್ಲಿ ದಲಿತ ಮತ್ತು ದಲಿತೇತರ ಹೆಣ್ಣು ಮಕ್ಕಳು ಅಂಬೇಡ್ಕರ್ ಅವರ ಅಶೋತ್ತರಗಳಿಗೆ ಬೆಂಬಲವಾಗಿದ್ದು ಕಾರ್ಯ ಮಾಡಿದರು. ಶೆಡ್ಯೂಲ್ಡ್ಕಾಸ್ಟ್ ಅಸೋಸಿಯೇಷನ್ ಕಾರ್ಯದರ್ಶಿಯಾಗಿದ್ದ ಬಾಪುಸಾಹೇಬ್ ರಾಜ್‌ಭೋಜ್ ಅವರ ಪತ್ನಿ ಮತ್ತು ಮಗಳು ಶಾಂತಾಬಾಯಿ ಚವ್ಹಾಣ ಅವರು ದಲಿತ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಲ್ಲದೆ ರಾಜಭೋಜ ಅವರು ಪ್ರಕಟಿಸುತ್ತಿದ್ದ "ದಲಿತ ಬಂಧು" ವಾರಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. 1948ರಲ್ಲಿ ಜೈಲಿನಿಂದ ಬಿಡುಗಡೆಯಾದ ರಾಜಭೋಜ್ ಅವರಿಗೆ ಸನ್ಮಾನ ಮಾಡುವ ಸಲುವಾಗಿ ಪುಣೆಯ ಸಮೀಪದ ಕೊಂದ್ವೆ–ಕಾಪ್ರೆ ಹಳ್ಳಿಯಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭವನ್ನು ಹಾಳು ಮಾಡಬೇಕೆಂದು ವಿರೋಧಿಗಳು ಕಲ್ಲು ತೂರಿದಾಗ ಓಡಿ ಹೋದ ಜನರನ್ನು ಉದ್ದೇಶಿಸಿ ರುಕ್ಮಿಣಿ ಬಾಯಿಯವರು "ಹೆಂಗಸಿನಂತೆ ಯಾಕೆ ಓಡುತ್ತಿದ್ದೀರಾ? ಹೆಂಗಸಾದ್ರೂ ನಾನಿಲ್ಲಿ ನಿಂತಿದ್ದೀನಿ. ನನ್ನ ಸಣ್ಣ ಮಕ್ಕಳು ಇಲ್ಲಿದ್ದಾರೆ. ನಾನು ಕದಲಲಿಲ್ಲ. ನೀವು ಗಂಡಸರು ಮುದುಕಿಯರ ಥರ ಓಡ್ತೀರಾ? ನನ್ನ ಬಳೆ ತಗೊಂಡು ಹಾಕ್ಕೊಳ್ಳಿ" ಎಂದು ಛೀಮಾರಿ ಹಾಕುವುದರ ಜೊತೆಗೆ ಮಹಿಳೆಯರನ್ನು ಉದ್ದೇಶಿಸಿ "ನೀವಾದರೂ ಅಲ್ಲಾಡದೆ ನಿಲ್ಲಿ, ನಾವು ಹೆಂಗಸರು ಸಭೆಯನ್ನು ಮುಂದುವರಿಸೋಣ"[2] ಎಂದು ಹೇಳಿದ್ದರು. ಕಲ್ಲುಗಳು ಬೀಳುತ್ತಿದ್ದರೂ ಸಹ ಸಭೆಯು ಯಶಸ್ವಿಯಾಯಿತು. ಬಾಬಾ ಸಾಹೇಬರ ಕುಟುಂಬದ ದಲಿತೇತರ ಒಡನಾಡಿಗಳಾದ ದೇವರಾಜ್ ವಿಷ್ಣು ನಾಯಕ್, ಗಂಗಾಧರ ಸಹಸ್ರಬುದ್ಧೆ, ಡಿ. ವಿ. ಪ್ರಧಾನ್, ಅನಂತ ಚಿತ್ರೆ, ದೇವರಾಜ್ ನಾಯಕ್ ಮೊದಲಾದವರು ಅಂಬೇಡ್ಕರ್‌ರ ನೇತೃತ್ವದಲ್ಲಿ 1927ರಲ್ಲಿ ಸಹಭೋಜನ ಕಾರ್ಯಕ್ರಮದ ಭಾಗವಾಗಿ ಸಮಾಜ್ ಸಮತಾ ಸಂಘವನ್ನು ಆರಂಭಿಸಿದ್ದರು. 1978ರಲ್ಲಿ ಆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ದೇವರಾಜ ಅವರ ಪತ್ನಿ ಇಂದಿರಾಬಾಯಿ, ಶ್ರೀಮತಿ ಸಹಸ್ರಬುದ್ಧೆ, ಶ್ರೀಮತಿ ಪ್ರಧಾನ್ ಹಾಗೂ ಇತರರು ಪ್ರಮುಖರಾಗಿದ್ದರು. ಇದರಿಂದ ಅವರು ಸಂಬಂಧಿಕರ ಕೋಪಕ್ಕೆ ಗುರಿಯಾದರೆಂದು ಹೇಳಲಾಗುತ್ತದೆ. ಆದರೆ ಇಂಥ ಸಹಪಂಕ್ತಿ ಭೋಜನ ಕಾರ್ಯಕ್ರಮಗಳ ಕುರಿತು ದಲಿತ ಮಹಿಳೆ ಶಾಂತಾಬಾಯಿ ಜಾಧವ್ ಅವರು ರತ್ನಗಿರಿಯ ಪತಿತ ಪಾವನ ದೇವಸ್ಥಾನದಲ್ಲಿ ನಡೆದ ಅಂತರ್ಜಾತಿ ಸಹಪಂತಿ ಭೋಜನದ ತಮ್ಮ ಅನುಭವಗಳನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. "ಆಗ ನಾನು ಒಂಭತ್ತೊ ಹತ್ತೋ ವರ್ಷದ ಹುಡುಗಿ, ಪರಖಾನೆಯಲ್ಲಿ ವಾಸಿಸುತ್ತಿದ್ದೆ. ಈ ಅಂತರ್ಜಾತಿ ಸಹಪಂಕ್ತಿ ಭೋಜನ ಕಾರ್ಯಕ್ರಮಗಳಿಗೆ ಹೋಗುವುದು ನನಗಿಷ್ಟವಾಗುತ್ತಿತ್ತು. ಒಂದೇ ಜಾಗದಲ್ಲಿ ಸ್ವಲ್ಪ ಸ್ಥಳ ಬಿಟ್ಟು ಅಸ್ಪೃಶ್ಯರು ಮತ್ತು ಸ್ಪೃಶ್ಯರಿಗೆ ಊಟ ನೀಡಲಾಗುತ್ತಿತ್ತು. ಬ್ರಾಹ್ಮಣ ಮಹಿಳೆಯರು ಊಟ ಬಡಿಸುತ್ತಿದ್ದರು. ಅಸ್ಪೃಶ್ಯರಿಗೆ ಅವರು ಊಟ ಬಡಿಸುವಾಗ ಸೀರೆಯನ್ನು ಭದ್ರವಾಗಿ ಸಿಕ್ಕಿಸಿಕೊಂಡು ಮುಟ್ಟಿಕೊಳ್ಳದಂತೆ ಜಾಗರೂಕರಾಗಿ

ಮೇಲಿನಿಂದ ಎಲೆಗೆ ಊಟ ಹಾಕುತ್ತಿದ್ದರು."[3] ಎಂದು ಹೇಳಿದ ಮಾತುಗಳು ಯೋಚಿಸುವಂತೆ ಮಾಡುತ್ತವೆ.

1924ರ ಫೆಬ್ರವರಿ 23 ಮತ್ತು 24 ರಂದು ಮೊಹಾಪಾದಲ್ಲಿ ನಡೆದ ಸೆಂಟ್ರಲ್ ಪ್ರಾವಿನ್ಸಸ್ ಮಹಾರ್ ಪರಿಷತ್ತಿನ ವಾರ್ಷಿಕ ಸಮ್ಮೇಳನದ ಮಹಿಳೆಯರ ಸಭೆಯಲ್ಲಿ "ಅಸ್ಪೃಶ್ಯರು ಸುಧಾರಣೆಗಳಿಗಾಗಿ ಸವರ್ಣೀಯ ಹಿಂದೂಗಳನ್ನು ಅವಲಂಬಿಸಬಾರದು. ನಮ್ಮ ವಿಮೋಚನೆಗಾಗಿ ನಾವೇ ಪ್ರಯತ್ನಿಸಬೇಕು" ಎಂಬ ಬಹು ಮುಖ್ಯ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಆ ಕಾಲದಲ್ಲಿ ದಲಿತ ಮಹಿಳೆಯರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡುವುದು ಕಷ್ಟ ಸಾಧ್ಯವಾಗಿತ್ತು. ಆದಕಾರಣ ಅಂಬೇಡ್ಕರ್ ಅವರು ಆಗಾಗ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಬೇಕೆಂದು ಕರೆ ನೀಡುತ್ತಿದ್ದರು. ಬಾಂಬೆಯ ನಯಗಾವ್ ನಲ್ಲಿ 27 ಮಾರ್ಚ್ 1938 ರಲ್ಲಿ ಇಂಡಿಪೆಂಡೆಂಟ್ ಲೇಬರ್ ಪಕ್ಷದ ಸಾಮಾನ್ಯ ಸಭೆ ನಡೆಯಿತು. ಅದರ ಅಧ್ಯಕ್ಷತೆ ವಹಿಸಿದ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಬಾಂಬೆಯಲ್ಲಿ ವಾಸಿಸುವ ನೂರು ಸಾವಿರ ಅಸ್ಪೃಶ್ಯರಲ್ಲಿ ನಾಲ್ಕು ಸಾವಿರ ಜನರು ಮಾತ್ರ ಪಕ್ಷದ ಸದಸ್ಯರಾಗಿರುವುದು ಅವಮಾನಕರ ಎಂದು ಹೇಳಿದ್ದಲ್ಲದೆ "ತಮ್ಮ ಎಲೆ ಅಡಿಕೆಗಾಗಿ ಎರಡು ರೂಪಾಯಿ ಖರ್ಚು ಮಾಡುವ ಮಹಿಳೆಯರಿಗೆ ವರ್ಷಕ್ಕೆ ಅರ್ಧ ರೂಪಾಯಿ ಸದಸ್ಯತ್ವ ಶುಲ್ಕ ನೀಡಲು ಕಷ್ಟವಾಗುತ್ತದೆಯೇ? ನಾನು ಇಲ್ಲಿರುವ ಮಹಿಳೆಯರ ಮೇಲೆ ಭರವಸೆ ಇಟ್ಟುಕೊಂಡಿದ್ದೇನೆ. ಅವರು ಮುಂದೆ ಬಂದು ಇಂಡಿಪೆಂಡೆಂಟ್ ಲೇಬರ್ ಪಕ್ಷದ ಸದಸ್ಯರಾದರೆ ಅದನ್ನು ಅನುಸರಿಸದೇ ಪುರುಷರಿಗೆ ಬೇರೆ ಆಯ್ಕೆ ಇಲ್ಲ ಎಂದು ಹೇಳಿದ್ದರು.[4]

1920ರ ಸುಮಾರಿಗೆ ಬಾಬಾ ಸಾಹೇಬರವರು ಅಸ್ಪೃಶ್ಯರ ಜೊತೆಗೆ ಸಾಮಾಜಿಕ ಚಟುವಟಿಕೆಗಳನ್ನು ಪ್ರಾರಂಭಿಸಿದಾಗ ಅಸ್ಪೃಶ್ಯ ಸಮುದಾಯವು ಸಂಪೂರ್ಣವಾಗಿ ಪಾಲ್ಗೊಳ್ಳಲಿಲ್ಲ. ಆದರೆ ನಂತರದ ದಿನಗಳಲ್ಲಿ ಅಸ್ಪೃಶ್ಯ ಪುರುಷರ ಜೊತೆ ಮಹಿಳೆಯರೂ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಆಸಕ್ತಿ ತೋರಿದ್ದಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಆರಂಭಿಸಿದರು. ದಲಿತ ಸಮುದಾಯಗಳಲ್ಲಿಯೇ ಮಹರ್ ಮತ್ತು ಮಾಂಗ್ ನಡುವೆ ಸಾಕಷ್ಟು ಅಂತರವಿತ್ತು. ಇವರ ತಿಕ್ಕಾಟವನ್ನೇ ಸಂಪ್ರದಾಯವಾದಿ ಹಿಂದೂಗಳು ತಮ್ಮ ಕಾರ್ಯಸಾಧನೆಗೆ ದಾಳವಾಗಿ ಬಳಸಿಕೊಳ್ಳತೊಡಗಿದರು. ಮಹರ್ ಮತ್ತು ಮಾಂಗರ ನಡುವಿನ ತಾರತಮ್ಯವನ್ನು ಹೋಗಲಾಡಿಸುವ ಕಾರ್ಯವನ್ನು ಅಂಬೇಡ್ಕರ್‌ವಾದಿ ಶಿವ ತಾರ್ಕರ್ ಅವರು ತೆಗೆದುಕೊಂಡರು. ದಿನಬಾಯಿ ಬೋಸ್ಲೆ ಅವರು 1925 ಅಕ್ಟೋಬರ್ 20ರಂದು ಕಸಬಾಪೇಟೆಯ ಮಾಂಗ್ ಕಾಲೋನಿಯಲ್ಲಿ ಭಾಷಣ ಮಾಡಿ ಉತ್ತಮ ಆರೋಗ್ಯದ ಪ್ರಾಮುಖ್ಯತೆ ಮತ್ತು ಸತ್ತ ಪ್ರಾಣಿಗಳ ಮಾಂಸದ ನಿರಾಕರಣೆ ಹಾಗೂ

ಸೇವಾ ಸದನ ಸಂಸ್ಥೆಯ ಬಳಕೆಯ ಕುರಿತು ಮಾತನಾಡಿದರು.

1933 ಡಿಸೆಂಬರ್ 30ರಂದು ನಾಗಪುರದಲ್ಲಿ ನಡೆದ ರಾಷ್ಟ್ರೀಯ ಸಾಮಾಜಿಕ ಸಮ್ಮೇಳನದಲ್ಲಿ ಶ್ರೀಮತಿ ವೇಣುತಾಯಿ ಭಾಟ್ಕರ್ ಎಂಬ ಮಹಾರ್ ಮಹಿಳೆಯ ದಲಿತ ಹೋರಾಟದ ಕುರಿತು "ಧೈರ್ಯವಾಗಿ ಯಾವುದೇ ಆಮಿಷಗಳಿಗೆ ಒಳಗಾಗದೆ ನನ್ನ ಜಾತಿಯೊಳಗೆ ಇದ್ದುಕೊಂಡೆ ನನ್ನ ಜಾತಿಯನ್ನು ಸುಧಾರಿಸಲು ಪ್ರಯತ್ನ ಮಾಡುವೆ"[5] ಎಂಬಂತ ಮಾತುಗಳು ದಲಿತ ಚಳುವಳಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯಷ್ಟೇ ಅಲ್ಲದೆ ಅವರು ತೆಗೆದುಕೊಂಡ ದೃಢ ನಿರ್ಧಾರಗಳಿಗೆ ಸಾಕ್ಷಿ.

ಮಹಿಳೆಯರಲ್ಲಿ ಆತ್ಮಗೌರವ ಬೆಳೆದಂತೆ ತಮ್ಮ ಹಕ್ಕುಗಳನ್ನು ಪಡೆಯಲು ಕಟಿಬದ್ಧರಾದರು ಪಾರ್ವತಿಬಾಯಿ ಶ್ರೀಫತ್ ಎಂಬ ಮಹಿಳೆ ಒಬ್ಬಳೇ ಸತ್ಯಾಗ್ರಹ ಮಾಡಿ ಸಾರ್ವಜನಿಕ ಬಾವಿಯಿಂದ ನೀರು ಸೇದುವ ಹಕ್ಕನ್ನು ಪಡೆದುಕೊಂಡಳು. ಅಂಬೇಡ್ಕರ್ ಅವರ ಸಿದ್ಧಾಂತವನ್ನು ಒಪ್ಪಿಕೊಂಡಿದ್ದ ಮಹಿಳೆಯರು ತಮ್ಮ ಕಾರ್ಯಗಳ ಮೂಲಕ ಬದ್ಧತೆ ಮೆರೆದರು. 50 ವರ್ಷದ ಸೋನಾ ಬಾಯಿ "ಜೈ ಭೀಮ್" ಎಂಬ ಘೋಷಣೆ ಕೂಗಿದ್ದಕ್ಕೆ ಹಿಂದೂ ಪುಂಡರು ದಯೆ ಇಲ್ಲದೆ ಅವಳನ್ನು ಹೊಡೆದು ಕತ್ತೆಯ ಮೇಲೆ ಮೆರವಣಿಗೆ ಮಾಡಿದರೂ ಹೆದರಲಿಲ್ಲ. ಅಂಬೇಡ್ಕರ್ ಅವರ ಹುಟ್ಟಿದ ದಿನ 1934 ರಲ್ಲಿಯೇ ಜಯಂತಿಯಾಗಿ ಇಡೀ ತಿಂಗಳು ನಡೆಯುವ ಹಬ್ಬದಂತಾಯಿತು. ಈ ಸಂದರ್ಭದಲ್ಲಿ ಮಹಿಳೆಯರು ಪ್ರತ್ಯೇಕ ಸಭೆಗಳನ್ನು ಏರ್ಪಡಿಸಿ ಸಂಭ್ರಮಾಚರಣೆಯ ರೂಪರೇಷೆಗಳನ್ನು ಸಿದ್ಧಪಡಿಸುತ್ತಿದ್ದರು. ಮಕ್ಕಳಿಗೆ ಸಿಹಿ ಹಂಚುವುದು, ಅರಿಶಿಣ ಕುಂಕುಮ ಕಾರ್ಯಕ್ರಮ, ಅಂಬೇಡ್ಕರ್ ಅವರ ಭಾವಚಿತ್ರದ ಮೆರವಣಿಗೆ ಜೊತೆಗೆ ಅವರ ಜೀವನದ ಕುರಿತು ಭಾಷಣ ಮಾಡುತ್ತಿದ್ದರು.

ಸೆಂಟ್ರಲ್ ಪ್ರಾಫಿನ್ಸಸ್ ಮತ್ತು ಖಾಂದೇಶ್‌ನಲ್ಲಿ ನಡೆದ ಅಸ್ಪೃಶ್ಯರ ಸಮ್ಮೇಳನದಲ್ಲಿ 300ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ 1936ರ ಮೊದಲ ದುಂಡು ಮೇಜಿನ ಪರಿಷತ್ತಿನಲ್ಲಿ ಅಸ್ಪೃಶ್ಯರ ಕುರಿತ ನಿಲುವನ್ನು ವಿರೋಧಿಸಿ ಮಹಿಳೆಯರು ನಿರ್ಣಯ ಮಂಡಿಸಿದರು. ಮುಂಬೈನಲ್ಲಿ 1938ರಲ್ಲಿ ದಲಿತ ಸಂಘವನ್ನು ಆರಂಭಿಸಲಾಯಿತು. ಈ ಸಂಘವು ಚಳುವಳಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ, ಹಿರಿಯ ಮಹಿಳೆಯರು ಕಿರಿಯಮಹಿಳೆಯರನ್ನು ಸಾಮಾಜಿಕ ಕಾರ್ಯದಲ್ಲಿ ತೊಡಗಲು ಸಹಕರಿಸುವುದು, ಇಂಡಿಪೆಂಡೆಂಟ್ ಲೇಬರ್ ಪಕ್ಷಕ್ಕೆ ಹೆಚ್ಚು ಹೆಚ್ಚು ಮಹಿಳೆಯರು ಸೇರುವಂತೆ ಮಾಡುವುದು, ಸಾರ್ವಜನಿಕ ಭಾಷಣಗಳ ಮೂಲಕ ಅನಕ್ಷರಸ್ಥ ಮಹಿಳೆಯರಲ್ಲಿ ಧೈರ್ಯ ತುಂಬುವುದು, ಮಹಿಳೆಯರಿಗೆ ನೈರ್ಮಲ್ಯದ ಕುರಿತು ತಿಳುವಳಿಕೆ, ವಿದ್ಯಾರ್ಥಿನಿಯರಿಗೆ ಆರ್ಥಿಕ ಸಹಾಯ ಮೊದಲಾದ ತತ್ವಗಳನ್ನು ಸಂಘವು ಅಳವಡಿಸಿಕೊಂಡಿತು.

ಅಂಬೇಡ್ಕರ್ ಅವರು ಸಾಮಾಜಿಕ ಸುಧಾರಣಾ ಕಾರ್ಯದಲ್ಲಿ ತೊಡಗಿದಾಗ ಅವರ ಬಳಿ ವಿದ್ವತ್ತು, ಕಾರ್ಯಯೋಜನೆ, ಜನರ ಬೆಂಬಲ ಎಲ್ಲವೂ ಇತ್ತು. ಆದರೆ ಹಣವಿರಲಿಲ್ಲ. ಮಹಾಡ್ ಸತ್ಯಾಗ್ರಹವನ್ನು ಆಯೋಜಿಸಿದಾಗ ಹಲವಾರು ಮಹಿಳೆಯರು ತಮ್ಮ ಗಂಡಂದಿರ ಮಾತನ್ನು ಮೀರಿ ತಮ್ಮ ಸ್ವಂತ ದುಡಿಮೆಯಲ್ಲಿ ಸಾಧ್ಯವಾದಷ್ಟು ದೇಣಿಗೆ ನೀಡಿದರು. ಮದುವೆ ನಾಮಕರಣದಂಥ ಸಂದರ್ಭಗಳಲ್ಲಿ ಚಳುವಳಿಗಾಗಿ ಹಣ ಸಂಗ್ರಹಣೆ ಮಾಡಲಾಗುತ್ತಿತ್ತು. ನಾಗಪುರದ ಸೀತಾ ಬರ್ಡಿ ಅವರಿಗೆ ಹೆಣ್ಣು ಮಗು ಜನಿಸಿದಾಗ ಮತ್ತು ಇಂದೋರಿನ ರುಕ್ಮಿಣಿ ಡೊಂಗ್ರೆ ಅವರಿಗೆ ಹೆಣ್ಣು ಮಗು ಜನಿಸಿದಾಗ ಸಭೆ ಏರ್ಪಡಿಸಿ ಹಣ ಸಂಗ್ರಹಿಸಿದ್ದೇ ಇದಕ್ಕೆ ಸಾಕ್ಷಿ. ಮಹಾಡ್ ಸತ್ಯಾಗ್ರಹದ ಕುರಿತು ನಿಷ್ಪಕ್ಷಪಾತ ವರದಿಗಳು ಪತ್ರಿಕೆಗಳಲ್ಲಿ ಬರಲಿಲ್ಲ. ಮುಂದಿನ ದಿನಗಳಲ್ಲಿ ಹೀಗಾಗಬಾರದೆಂದು ಮತ್ತು ಚಳುವಳಿಯ ಸಿದ್ಧಾಂತ ಎಲ್ಲರಿಗೂ ತಲುಪಲಿ ಎಂದು ಸ್ವತಹ ಅಂಬೇಡ್ಕರ್ ಅವರೇ 'ಬಹಿಷ್ಕೃತ್ ಭಾರತ', 'ಮೂಕ ನಾಯಕ್' ಮತ್ತು 'ಜನತಾ' ಪತ್ರಿಕೆಗಳನ್ನು ಆರಂಭಿಸಿದಾಗ ಮಹಿಳೆಯರು ಉದಾರವಾಗಿ ದೇಣಿಗೆ ನೀಡಿದರು. ಜನತಾ ಪತ್ರಿಕೆಗೆ ಪುಣೆಯ ದಲಿತ ಮಹಿಳಾ ಮಂಡಳಿಯಿಂದ 5ರೂಪಾಯಿ ದೇಣಿಗೆ, ಕಟ್ಟಡ ನಿರ್ಮಾಣ ನಿಧಿಗೆ ಸುಗಂಧಬಾಯಿ ಜಾಧವ್ ಅವರಿಂದ 101ರೂಪಾಯಿಗಳ ದೇಣಿಗೆ, ನಿಪ್ಪಾಣಿಯಲ್ಲಿ ಬಾಬಾ ಸಾಹೇಬರು ಮಾಡಿದ ಸಭೆಯ ಇಡೀ ಖರ್ಚನ್ನು ವಹಿಸಿಕೊಂಡ ಮೀರಾಬಾಯಿ ಹೀಗೆ ದಲಿತ ಚಳುವಳಿಗೆ ಆಗಾಗ್ಗೆ ಬೇಕಾಗುವ ಹಣಕಾಸಿನ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿತ್ತು.

ಅಸ್ಪೃಶ್ಯ ಸಮುದಾಯಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಅಂಥವರ ನಾಯಕತ್ವ ದೊರೆತ ಮೇಲೆ ಅವರ ಜೀವನ ಹೊಸ ಚೈತನ್ಯದಿಂದ ತುಂಬಿಕೊಂಡಿತು. ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಸಾಮೂಹಿಕವಾಗಿ ಮತ್ತು ಸಂಘಟನೆಗಳ ಮೂಲಕ ಕಂಡುಕೊಳ್ಳುವ ಅರಿವನ್ನು ಹೊಂದಿದರು. ಅಂಬಾಬಾಯಿ ದೇವಾಲಯ ಪ್ರವೇಶ ಸತ್ಯಾಗ್ರಹವನ್ನು 1927ರಲ್ಲಿ ಆಯೋಜಿಸಲಾಯಿತು. ಪಂಡರಿನಾಥ್ ಪಾಟೀಲ್ ಮತ್ತು ಪಂಜಬರಾವ್ ದೇಶಮುಖ್ ಈ ಹೋರಾಟವನ್ನು ಬೆಂಬಲಿಸಿದರು. ದೇವಾಲಯ ಸಂಕೀರ್ಣದ ಪಂಚಾಯಿತಿಗೆ ಅಹವಾಲು ಸಲ್ಲಿಸಿದಾಗ ದೇವಾಲಯ ಸಮಿತಿಯು ಅದನ್ನು ನಿರಾಕರಿಸಿತು. ಇದಕ್ಕೆ ಪ್ರತಿಯಾಗಿ ನಡೆದ ಬೃಹತ್ ಸಭೆಯಲ್ಲಿ ಅಸ್ಪೃಶ್ಯರ ಪ್ರವೇಶಕ್ಕೆ ಅನುಮತಿ ನೀಡದಿದ್ದರೆ ಸತ್ಯಾಗ್ರಹ ಮಾಡುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಕಾರಣ ಹಿಂದೂ ಮೇಲ್ಜಾತಿಯವರು ದೇವಾಲಯ ಪ್ರವೇಶಕ್ಕೆ ಹಾಕಿದ ನಿರ್ಬಂಧನೆಗಳು ಅಸ್ಪೃಶ್ಯರ ವಿರುದ್ಧವೇ ಆಗಿದ್ದವು. ಆದ್ದರಿಂದ 1927ರ ನವೆಂಬರ್ 13ರಂದು ಬಾಬಾ ಸಾಹೇಬ್ ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಅಸ್ಪೃಶ್ಯರು ಮತ್ತು ಹಿಂದೂ ಮೇಲ್ಜಾತಿಗಳ ಸಮಾವೇಶ ನಡೆಯಿತು. ಈ ಸಮಾವೇಶದ ಭಾಗವಾಗಿ

ಆಯೋಜಿಸಿದ್ದ ಮೆರವಣಿಗೆಯಲ್ಲಿ 50 ಜನ ಮಹಿಳೆಯರು ಭಾಗವಹಿಸಿದ್ದರು.

ಸಾರ್ವಜನಿಕ ನೀರಿನ ಜಾಗಗಳು, ಮಾರುಕಟ್ಟೆಗಳು, ಶಾಲೆಗಳು ಮತ್ತು ದೇವಾಲಯಗಳು ಅಸ್ಪೃಶ್ಯರ ಪ್ರವೇಶಕ್ಕೆ ಮುಕ್ತವಾಗಿರಬೇಕು ಎಂಬ ಬಾಂಬೆ ಶಾಸನ ಪರಿಷತ್ತಿನ ನಿರ್ಣಯವನ್ನು ಕಾರ್ಯಗತಗೊಳಿಸಲು ಅಂಬೇಡ್ಕರ್ ಅವರು ಮಹಾಡ್‌ನಲ್ಲಿನ ಸಾರ್ವಜನಿಕ ಕೆರೆಯ ಬಳಿ ಸತ್ಯಾಗ್ರಹ ಮಾಡಲು ತೀರ್ಮಾನಿಸಿದರು. 19 ಮತ್ತು 20 ಮಾರ್ಚ್ 1927ರಲ್ಲಿ ಮಹಾಡ್‌ನಲ್ಲಿ ನಡೆದ ಕೋಲಾಬಾ ಜಿಲ್ಲೆಯ ಬಹಿಷ್ಕೃತ ಜಾತಿಗಳ ಮೊದಲ ಸಭೆಯಲ್ಲಿ ಚೌಡಾರ್ ಕೆರೆಯಿಂದ ನೀರು ತೆಗೆದುಕೊಳ್ಳುವುದನ್ನು ಆರಂಭಿಸಬೇಕೆಂದು ನಿರ್ಧರಿಸಲಾಯಿತು. ಅದರಂತೆ ಅಂಬೇಡ್ಕರ್ ಅವರು ಎಲ್ಲರೊಂದಿಗೆ ಕೆರೆಯ ನೀರನ್ನು ಮುಟ್ಟುವ ಮೂಲಕ ತಮ್ಮ ಹಕ್ಕನ್ನು ಪ್ರತಿಪಾದಿಸಿದರು. ಆದರೆ ಈ ಕೆರೆಯನ್ನು ಚೌದರಿಕೆರೆ ಎಂದು ಕರೆಯುವ ಕಾರಣ ಅದು ಖಾಸಗಿ ಮಾಲೀಕತ್ವದ ಕೆರೆಯಾಗಿದ್ದು ಅಸ್ಪೃಶ್ಯರು ಅತಿಕ್ರಮಣ ಮಾಡಿದ್ದಾರೆಂದು ಆಪಾದಿಸಲಾಯಿತು. ಆದರೆ ಅದು ಸುಳ್ಳು ಆಪಾದನೆ ಎಂಬುದು ತನಿಖೆಯಿಂದ ರುಜುವಾತಾಯಿತು. ಮಹಾಡ್‌ನಲ್ಲಿ ಮತ್ತೊಂದು ಸತ್ಯಾಗ್ರಹವನ್ನು 25 ಮತ್ತು 26 ಡಿಸೆಂಬರ್ 1927 ರಂದು ನಡೆಸಲಾಯಿತು. ಬಾಬಾ ಸಾಹೇಬ್ ಸಹವರ್ತಿಗಳಾದ ಗಾಯಕ್ವಾಡ್, ರಣಖಂಬೆ, ಶಿವತಾರಕರ್, ಅನಂತರಾವ್ ಚಿತ್ರೆ, ಭಾಯ್ ಚಿತ್ರೆ, ಬಾಪು ಸಹಸ್ರಬುದ್ಧೆ ಮುಂತಾದವರ ಜೊತೆ ಸಾವಿರಾರು ಅಸ್ಪೃಶ್ಯರು ಭಾಗವಹಿಸಿದರು. ಅವರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ ಕೆರೆಯ ಕುರಿತಾದ ಮೊಕದ್ದಮೆಯು ನ್ಯಾಯಾಲಯದಲ್ಲಿ ಇರುವುದರಿಂದ ಜಿಲ್ಲಾಧಿಕಾರಿಗಳು ಯಾರು ಕೆರೆಯನ್ನು ಮುಟ್ಟಬಾರದೆಂದು ಮನವಿ ಮಾಡಿದರು. ಹಲವರು ತಮ್ಮ ಭಾಷಣದಲ್ಲಿ ಸತ್ಯಾಗ್ರಹದ ಕುರಿತು ಮಾತನಾಡಿದರು. ಶಾಂತಾಬಾಯಿ ಎಂಬ ಹುಡುಗಿಯು ಮಾತನಾಡಿದಳು. ಬಾಬಾ ಸಾಹೇಬರ ಭಾಷಣದ ನಂತರ ಮಹಿಳೆಯರು ಮತ್ತು ಶೂದ್ರರನ್ನು ಪ್ರಾಣಿಗಳಿಗಿಂತ ಕಡೆಯಾಗಿ ಕಾಣುವ ಮನುಸ್ಮೃತಿಯನ್ನು ಸುಡುವ ನಿರ್ಣಯವನ್ನು ಕೈಗೊಳ್ಳಲಾಯಿತು. ಮನುಸ್ಮೃತಿಯನ್ನು ಸುಟ್ಟ ಮರುದಿನ ಸತ್ಯಾಗ್ರಹಿಗಳ ಬೃಹತ್ ಮೆರವಣಿಗೆ ಆಯೋಜಿಸಲಾಗಿತ್ತು. 50 ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಈ ಸಭೆಯಲ್ಲಿ ನೆರೆದ ಹೆಣ್ಣು ಮಕ್ಕಳನ್ನು ಉದ್ದೇಶಿಸಿ ಅಂಬೇಡ್ಕರ್ ಅವರು ಮಾತನಾಡಿದರು. ಮಹಿಳೆಯರು ಸಭೆಗಳಲ್ಲಿ ಭಾಗವಹಿಸುವುದು, ಪುರುಷರಿಗೆ ಈ ಹೋರಾಟದಲ್ಲಿ ಬೆಂಬಲ ನೀಡುವುದು, ಸ್ವತಃ ಮಹಿಳೆಯರು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವುದು, ಅಸ್ಪೃಶ್ಯರೆಂದು ಗುರುತಿಸುವಂತಿರುವ ವೇಷಭೂಷಣಗಳನ್ನು ಬಿಡುವುದು, ಸತ್ತ ಪ್ರಾಣಿಗಳ ಮಾಂಸ ಸೇವನೆಯ ನಿರಾಕರಣೆ, ಮಹಿಳೆಯರೂ ಶಿಕ್ಷಣವನ್ನು ಪಡೆಯುವುದು ಹೀಗೆ ಮುಂತಾದ ವಿಷಯಗಳ ಕುರಿತಾದ ಈ ಭಾಷಣ ಅಭೂತಪೂರ್ವವಾಗಿದ್ದು

ಮಹಿಳೆಯರನ್ನು ಇನ್ನಷ್ಟು ಕಾರ್ಯಪ್ರವೃತ್ತರಾಗುವಂತೆ ಮಾಡಿತು.

ಪುಣೆಯ ಪಾರ್ವತಿ ದೇವಾಲಯದ ಆವರಣವನ್ನು ಪ್ರವೇಶಿಸಲು ತೀರ್ಮಾನಿಸಿ 13 ಅಕ್ಟೋಬರ್ 1929ರಲ್ಲಿ ಸತ್ಯಾಗ್ರಹ ಆರಂಭಿಸಲಾಯಿತು. ಮಹಾರಾಷ್ಟ್ರದ ಎಲ್ಲಾಕಡೆಯಿಂದ ಅಸ್ಪೃಶ್ಯರು ಪಾರ್ವತಿ ಬೆಟ್ಟದ ತಪ್ಪಲಲ್ಲಿ ಬಂದು ಸೇರಿದರು. ಈ ಸತ್ಯಾಗ್ರಹದಲ್ಲಿ ಇನ್ನೂ ಹೆಚ್ಚು ಮಹಿಳೆಯರು ಪಾಲ್ಗೊಂಡರು. ಶಿವರಾಮ ಕಾಂಬಳೆ ಅವರ ಪತ್ನಿ ತನುಬಾಯಿ ಕಾಂಬಳೆ ಸತ್ಯಾಗ್ರಹದ ಒಂದು ಗುಂಪಿನ ಮುಖಂಡರಾಗಿದ್ದರು. ಇನ್ನೊಂದಕ್ಕೆ ಅವರ ಮಗಳು ಮತ್ತು ಶ್ರೀ ಕೋಥಲೇಕರ್ ಅವರ ತಾಯಿ ಮೂರನೇ ಗುಂಪಿನಲ್ಲಿ ಇದ್ದರು. (1929 ರ ಬಹಿಷ್ಕೃತ ಭಾರತದಲ್ಲಿ ಖೈರಮೋಡೆ ಅವರು ಬರೆದ ಅಂಬೇಡ್ಕರ್ ಅವರ ಜೀವನ ಚರಿತ್ರೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ದಾಖಲಿಸಲಾಗಿದೆ)

ನಾಸಿಕ್‌ನ ಕಾಳಾರಾಮ ದೇವಾಲಯ ಪ್ರವೇಶಕ್ಕಾಗಿ 2 ಮಾರ್ಚ್ 1930 ರಂದು ಬಾಬಾ ಸಾಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ ಮಹಾರವಾಡಾದ ಬಯಲು ಮೈದಾನದಲ್ಲಿ 8000 ಪುರುಷ ಮತ್ತು ಮಹಿಳೆಯರು ಸೇರಿದ್ದರು. ಬಾಬಾ ಸಾಹೇಬ್, ಪತಿತಪಾವನ ದಾಸ್, ಪಿ. ಎನ್. ರಾಜಭೋಜ್, ನಾಯಕ್ ಮಾಸ್ಟರ್ ಸೇರಿದಂತೆ ಹಲವರ ಭಾಷಣಗಳಿದ್ದವು. ಸಾವಿರದ ಆರುನೂರು ಜನ ಮೈದಾನದಿಂದ ಮೆರವಣಿಗೆ ಹೊರಟಾಗ ಐದುನೂರು ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಆದರೆ ಕಾಳಾರಾಂ ದೇವಾಲಯದ ಬಾಗಿಲು ಮುಚ್ಚಿದ್ದರಿಂದ ಗೋದಾವರಿ ತೀರದತ್ತ ಮೆರವಣಿಗೆ ಸಾಗಿತು. ಬಾಬಾ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೇವಾಲಯದ ಪ್ರವೇಶದ್ವಾರದಲ್ಲಿ ಪ್ರತಿಭಟನೆ ಮಾಡುವವರ ಹೆಸರುಗಳನ್ನು ಪಟ್ಟಿ ಮಾಡಲಾಯಿತು. 35 ಜನ ಮಹಿಳೆಯರು ಹೆಸರುಕೊಟ್ಟರು. ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಸತ್ಯಾಗ್ರಹಿಗಳ ಮೇಲೆ ಜಾತೀವಾದಿ ಹಿಂದೂಗಳು ಕಲ್ಲು ಎಸೆಯಲಾರಂಭಿಸಿದರೂ ಯಶಸ್ವಿಯಾಗಲಿಲ್ಲ. ಮಾರ್ಚ್ 2ರಿಂದ ಸತ್ಯಾಗ್ರಹ ಪ್ರಾರಂಭವಾಗಿದ್ದರೂ 7 ಏಪ್ರಿಲ್ 1930ರಂದು ನೂರಾರು ಅಸ್ಪೃಶ್ಯರು ದೇವಾಲಯ ಪ್ರವೇಶ ಮಾಡಿದರು. ದೇವಾಲಯದ ಪೂಜಾರಿ ಅಸ್ಪೃಶ್ಯ ಹುಡುಗಿಯೊಬ್ಬಳನ್ನು ನೂಕಿದಾಗ ಆಕೆ ಆತನ ಕೆನ್ನೆಗೆ ಬಾರಿಸಿದಳು.

31 ಡಿಸೆಂಬರ್ 1931ರಲ್ಲಿ ಅಸ್ಪೃಶ್ಯ ಸತ್ಯಾಗ್ರಹಿಗಳು ರಾಮಕುಂಡ ಪ್ರವೇಶ ಆರಂಭಿಸಿದರು. ಅಸ್ಪೃಶ್ಯರಾದ ದಾಮೋದರ್ ಮೋಹಿತೆ ಮತ್ತು ಕೃಷ್ಣಾಜಿ ಗೋಪಾಲ್‌ರಾವ್ ಅವರು ಪೂಜಾರಿಯ ಖಾಸಗಿ ಬಾಗಿಲಿನ ಮೂಲಕ 'ವಿಜಯ' ಎಂದು ಘೋಷಣೆ ಕೂಗುತ್ತ ದೇವಾಲಯ ಪ್ರವೇಶಿಸಿದರು. ಆಗ ಜಾತೀವಾದಿ ಹಿಂದೂಗಳು ಅಸ್ಪೃಶ್ಯರ ಮೇಲೆ ಕಲ್ಲುತೂರಿದಾಗ ಕೆಲವರಿಗೆ ಗಾಯಗಳಾದವು.

ರಮಾಬಾಯಿ ಜಾಧವ್ ದೇವಾಲಯ ಸುತ್ತಲೂ ಇದ್ದ ಪೊಲೀಸರ ಬೇಲಿಯನ್ನು ಇತರರೊಂದಿಗೆ ಸೇರಿ ಮುರಿಯಲು ಪ್ರಯತ್ನಿಸಿದಾಗ ಅವರನ್ನು ಬಂಧಿಸಿದರು. ಸೀತಾಬಾಯಿ, ಗೀತಾಬಾಯಿಯವರು ಕೂಡ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. 27 ಮಹಿಳೆಯರ ಮೇಲೆ ಕೇಸ್ ದಾಖಲಿಸಲಾಯಿತು. ಆದರೆ 2ರೂಪಾಯಿ ದಂಡ ನೀಡಲು ನಿರಾಕರಿಸಿ ಮಹಿಳೆಯರು ಜೈಲುವಾಸ ಅನುಭವಿಸಿದರು.

ಅಂಬೇಡ್ಕರ್ ಚಳುವಳಿಯ ಪ್ರಭಾವ ಹೆಚ್ಚಾದಂತೆ ಮಹಾರರಲ್ಲದೆ ಇತರ ಅಸ್ಪೃಶ್ಯ ಜಾತಿಗಳ ಮಹಿಳೆಯರು ಸಾಮಾಜಿಕ ಹೋರಾಟದಲ್ಲಿ ತೊಡಗಿಕೊಂಡರು. ರಾಜ್ಯಮಟ್ಟದ ಢೋರ್ ಮತ್ತು ಚಾಂಬಾರ್ ಜಾತಿಯವರ ಸಮಾವೇಶವನ್ನು 29 ಮೇ 1956ರಲ್ಲಿ ಪುಣೆಯಲ್ಲಿ ನಡೆಸಲಾಯಿತು. ಈ ಸಮಾವೇಶದಲ್ಲಿ ಮಾತನಾಡಿದ ಸಾವಿತ್ರಿಬಾಯಿ ಭೋರಡೆ ಅವರು "ಹುಡುಗರಿಗಿಂತ ಹುಡುಗಿಯರಿಗೆ ಶಾಲೆಯ ಅಗತ್ಯವಿದೆ. ಮುಂದಿನ ಪೀಳಿಗೆಯವರು ನಾಶವಾಗುವುದನ್ನು ತಡೆಯಬೇಕಾದರೆ ಮಹಿಳೆಯರಿಗೆ ಶಿಕ್ಷಣ ನೀಡಬೇಕು. ಶುಚಿತ್ವ, ಉತ್ತಮ ಆರೋಗ್ಯ ಮತ್ತು ಉತ್ತಮ ಪೋಷಣೆಗೆ ಮಹಿಳೆಯರಿಗೆ ಶಿಕ್ಷಣ ಅತ್ಯವಶ್ಯಕ"[6] ಎಂದು ಹೇಳಿದರು.

1935ರ ಅಕ್ಟೋಬರ್ 13ರಂದು ಯೆವಲಾದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು "ನಾನು ಹಿಂದೂವಾಗಿ ಹುಟ್ಟಿರುವೆ ಆದರೆ ಹಿಂದುವಾಗಿ ಸಾಯುವುದಿಲ್ಲ" ಎಂದು ಘೋಷಿಸುವ ಮೂಲಕ ಧರ್ಮ ಬದಲಾಯಿಸುವ ನಿರ್ಧಾರವನ್ನು ಪ್ರಕಟಿಸಿದರು. ಈ ಮತಾಂತರದ ಘೋಷಣೆಯಿಂದ ದೇಶದೆಲ್ಲೆಡೆ ಚರ್ಚೆಗಳು ಪ್ರಾರಂಭವಾದವು. ಮಹಿಳೆಯರು ಮತಾಂತರದ ಕರೆಯನ್ನು ಬೆಂಬಲಿಸಲು ತಮ್ಮದೇ ಸಮ್ಮೇಳನಗಳನ್ನು ನಡೆಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಜನಾಬಾಯಿ ಮೋರೆ 1936ರ ಮೇ 30 ಮತ್ತು 31 ರಂದು ನಡೆದ ಬಾಂಬೆ ಮಹಾರ್ ಪರಿಷತ್ ಸಭೆಯಲ್ಲಿ ಬಾಬಾ ಸಾಹೇಬರು ಯಾವ ಧರ್ಮವನ್ನೇ ಸ್ವೀಕರಿಸಲಿ ಆ ಧರ್ಮವನ್ನು ನಾವು ಸೇರಲು ಉತ್ಸುಕರಾಗಿದ್ದೇವೆ ಎಂದರು. ಶ್ರೀಮತಿ ರಾಜಾಬಾಯಿ ಗಾಯಕವಾಡ್ ಅವರು "ಯಾವಧರ್ಮದಲ್ಲಿ ನಾವು ಮಹಿಳೆಯರು ಶೌರ್ಯದ ತಾಯಂದಿರು ಶೌರ್ಯದ ಸೋದರಿಯರು ಮತ್ತು ಶೌರ್ಯದ ಹೆಂಡತಿಯರಾಗಲು ಅವಕಾಶವಿರುವುದೋ ಅಂತಹಧರ್ಮವನ್ನು ನಮಗೆ ತೋರಿಸಿ ನಿಮ್ಮ ಯಾವುದೇ ನಿರ್ಣಯಕ್ಕೆ ನಮ್ಮ ಬೆಂಬಲವಿದೆ"[7] ಎಂದು ಸಮ್ಮತಿ ಸೂಚಿಸಿದರು. ಶ್ರೀಮತಿ ಸೋನಾಬಾಯಿ ದಾವರೆ ಅವರು "ನಮ್ಮನ್ನು ಮಾನವೀಯವಾಗಿ ನಡೆಸಿಕೊಳ್ಳುವ ಹಕ್ಕನ್ನು ನೀಡುವ ಧರ್ಮವನ್ನು ಮಾತ್ರ ನಾವು ಅಪ್ಪಿಕೊಳ್ಳಬೇಕು"[8] ಎಂದರು. ಶ್ರೀಮತಿ ಭಾಗೀರತಿ ತಾಂಬೆ ಅವರು "ಮತಾಂತರದ ವಿಚಾರದಲ್ಲಿ ಬಾಬಾ ಸಾಹೇಬರ ತೀರ್ಮಾನವೇ ನಮ್ಮ ತೀರ್ಮಾನ ಆದರೆ ಹೊಸ ಧರ್ಮದಲ್ಲಿ ನಾವು ಪರದಾ ಹಾಕುವಂತಾಗಬಾರದು. ನಮ್ಮ ಸೋದರಿಯರಂತೆಯೇ ಸಮಾಜದಲ್ಲಿ ಮುಕ್ತವಾಗಿ

ಓಡಾಡುವಂತಹ ಧರ್ಮವನ್ನು ನಾವು ಒಪ್ಪಿಕೊಳ್ಳುತ್ತೇವೆ"[9] ಎಂದು ಹೇಳುವ ಮೂಲಕ ಸೂಚ್ಯವಾಗಿ ಇಸ್ಲಾಂಧರ್ಮಕ್ಕೆ ಮತಾಂತರ ಹೊಂದುವುದು ಬೇಡವೆಂದು ತಿಳಿಸಿದರು. ಮತಾಂತರದ ಕುರಿತು ಮಹಿಳೆಯರ ತಿಳುವಳಿಕೆ ಎಷ್ಟು ತೀಕ್ಷ್ಣವಾಗಿತ್ತು ಎಂಬುದು ಈ ಮಹಿಳೆಯರ ಮಾತುಗಳಿಂದ ವ್ಯಕ್ತವಾಗುತ್ತದೆ.

ಅಂಬೇಡ್ಕರ್ ಅವರು ಧರ್ಮ ಬದಲಾವಣೆಯ ಘೋಷಣೆಯ ನಂತರ 21 ವರ್ಷಗಳ ಕಾಲ ಅಧ್ಯಯನವನ್ನು ಕೈಕೊಂಡರು. ಕೊನೆಗೆ 1956ರ ಅಕ್ಟೋಬರ್ 14ರಂದು ಬೌದ್ಧಧರ್ಮದ ದೀಕ್ಷೆ ಪಡೆಯುವ ಸಮಾರಂಭವನ್ನು ನಾಗಪುರದಲ್ಲಿ ಆಯೋಜಿಸಲಾಯಿತು. ಸಾವಿರಾರು ಪುರುಷ ಮತ್ತು ಮಹಿಳೆಯರು ಬೌದ್ಧಧರ್ಮ ಸ್ವೀಕರಿಸಲು ಕಾರ್ಯಕ್ರಮವನ್ನು ವೀಕ್ಷಿಸಲು ನಾಗಪುರಕ್ಕೆ ಧಾವಿಸಿದರು. ಅತ್ಯಂತ ಸಂಭ್ರಮದಿಂದ ಮತಾಂತರ ಕಾರ್ಯಕ್ರಮ ಜರುಗಿತು. 1961ರ ಜನಗಣತಿಯಂತೆ 2 ಮಿಲಿಯನ್ ದಲಿತರು ಬೌದ್ಧಧರ್ಮ ಸ್ವೀಕರಿಸಿದರು. ಬೌದ್ಧಧರ್ಮದ ಪ್ರಚಾರ, ಬೌದ್ಧಧರ್ಮಕ್ಕೆ ಮತ್ತಷ್ಟು ಅಸ್ಪೃಶ್ಯರನ್ನು ಮತಾಂತರಗೊಳಿಸುವ ಕಾರ್ಯ ಮತ್ತು ಬೌದ್ಧವಿಹಾರಗಳ ನಿರ್ಮಾಣದಲ್ಲಿಯೂ ಮಹಿಳೆಯರು ಪಾತ್ರ ನಗಣ್ಯವಾದದು.

1920ರಲ್ಲಿ ಅಂಬೇಡ್ಕರ್ ಅವರು ದಲಿತ ಚಳುವಳಿಯ ಮುಂದಾಳತ್ವ ವಹಿಸಿದಂದಿನಿಂದ ಅಂಬೇಡ್ಕರ್ ಅವರ ಪರಿನಿರ್ವಾಣದವರೆಗಿನ ಮಹಾರಾಷ್ಟ್ರದಲ್ಲಿ ನಡೆದ ದಲಿತ ಚಳುವಳಿಯಲ್ಲಿ ಮಹಿಳೆಯರ ಕೊಡುಗೆಯು ಚಿರಸ್ಮರಣೀಯವಾದುದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪರಿನಿರ್ವಾಣದ ನಂತರ ಅವರ ಇಚ್ಛೆಯಂತೆ 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ಸ್ಥಾಪಿಸಲಾಯಿತು. ಸಮತಾ ಸೈನಿಕ ದಳ ಮತ್ತು ಬೌದ್ಧ ಮಹಾಸಭಾವನ್ನು ಮರುರಚಿಸಲಾಯಿತು. ರಿಪಬ್ಲಿಕನ್ ಪಕ್ಷದ ಕಾರ್ಯಕರ್ತರು ರಾಜಕೀಯ ಮತ್ತು ಆರ್ಥಿಕ ಹೋರಾಟಗಳ ಜೊತೆಗೆ ಧಾರ್ಮಿಕ ಮತಾಂತರದ ಕಾರ್ಯವನ್ನು ಮುಂದುವರಿಸಿದರು. ಈ ಎಲ್ಲ ಕಾರ್ಯಗಳಲ್ಲಿ ಮಹಿಳೆಯರು ಪುರುಷರಂತೆ ದಲಿತೋದ್ಧಾರದ ಕಾರ್ಯಗಳಲ್ಲಿ ತೊಡಗಿಕೊಂಡರು.

**ಕೊನೆ ಟಿಪ್ಪಣಿಗಳು:**

1. ಊರ್ಮಿಳಾ ಪವಾರ್ & ಮೀನಾಕ್ಷಿ ಮೂನ್ (ಮೂಲ), ಸರಸ್ವತಿ ದು. (ಅನು), (2022), ನಾವೂ ಇತಿಹಾಸ ಕಟ್ಟಿದೆವು, ಕವಿ ಪ್ರಕಾಶನ, ಉತ್ತರ ಕನ್ನಡ, ಪು. ಸಂ. 58
2. ಅದೇ, ಪು. ಸಂ. 59
3. ಅದೇ, ಪು. ಸಂ. 78
4. ಜನತಾ, ಏಪ್ರಿಲ್ 2, 1938
5. ಅದೇ, ಪು. ಸಂ. 98
6. ಅದೇ, ಪು. ಸಂ. 100
7. ಅದೇ, ಪು. ಸಂ. 205
8. ಅದೇ, ಪು. ಸಂ. 206
9. ಅದೇ, ಪು. ಸಂ. 206

**ಪರಾಮರ್ಶನ ಗ್ರಂಥಗಳು:**


1. ಊರ್ಮಿಳಾ ಪವಾರ್ & ಮೀನಾಕ್ಷಿ ಮೂನ್ (ಮೂಲ), ಸರಸ್ವತಿ ದು. (ಅನು), (2022), ನಾವೂ ಇತಿಹಾಸ ಕಟ್ಟಿದೆವು, ಕವಿ ಪ್ರಕಾಶನ, ಉತ್ತರ ಕನ್ನಡ.
2. ಅರವಿಂದ ಮಾಲಗತ್ತಿ, (2002), ದಲಿತ ಮಾರ್ಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಮುನಿವೆಂಕಟಪ್ಪ, (2009), ದಲಿತ ಚಳುವಳಿ ಚರಿತ್ರೆ, ತನು ಮನ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.